**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಆಡಳಿತ-ಎ/ಅ.ಉನೇ/01/2018-19.

ನಿರ್ದೇಶಕರ ಕಚೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012
ದಿನಾಂಕ: 06/07/2018

**ಜ್ಞಾಪನ**

**ವಿಷಯ:-** 2018-19ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

**ಉಲ್ಲೇಖ:-** ಸರ್ಕಾರದ ಆದೇಶ ಸಂಖ್ಯೆ: ಇಡಿ 79 ಡಿಜಿಡಿ 2018, ದಿನಾಂಕ: 02/07/2018.

*****

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ನೇರ ನೇಮಕಾತಿ ಮೂಲಕ ಉಪನ್ಯಾಸಕರನ್ನು ಭರ್ತಿ ಮಾಡಿಕೊಳ್ಳುವವರೆಗೆ ಅಥವಾ ಮಾರ್ಚ್ 2019 ರವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಕೆಲವು ಷರತ್ತುಗಳಿಗೆ ಒಳಪಡಿಸಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಸರ್ಕಾರ ಅನುಮತಿಸಿದೆ. ಅತಿಥಿ ಉಪನ್ಯಾಸಕರಿಗೆ ಪ್ರತಿ ಮಾಹೆ ರೂ. 9000/- ಗಳನ್ನು ನಿಗಧಿಪಡಿಸಿ ಸರ್ಕಾರವು ಆದೇಶಿಸಿದೆ. ಸರ್ಕಾರದ ಆದೇಶದ ಪ್ರತಿಯನ್ನು ಲಗತ್ತಿಸಿದೆ.

ಮುಂದುವರೆದು, 2018-19ನೇ ಸಾಲಿನಲ್ಲಿ ಬಿ.ಇಡಿ. ವ್ಯಾಸಂಗಕ್ಕೆ ತೆರಳಿರುವ ಉಪನ್ಯಾಸಕರ ಸ್ಥಾನಗಳನ್ನೂ ಒಳಗೊಂಡಂತೆ ಸರ್ಕಾರವು ಅನುಮತಿ ನೀಡಿರುವ 3376 ಸಂಖ್ಯಾ ವ್ಯಾಪ್ತಿಯೊಳಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಕಾರ್ಯಭಾರ ಕಡಿಮೆ ಅಥವಾ ಇಲ್ಲದಿರುವ ಉಪನ್ಯಾಸಕರುಗಳಿಗೆ ನಿಗಧಿತ ಕಾರ್ಯಭಾರವನ್ನು ಸರಿದೂಗಿಸುವ ಸಲುವಾಗಿ ಅಗತ್ಯ ಕಾರ್ಯಭಾರವಿರುವ ಕಾಲೇಜುಗಳಿಗೆ ಉಪನ್ಯಾಸಕರನ್ನು ನಿಯೋಜಿಸುವುದು. ಇನ್ನುಳಿದ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಮಾತ್ರ ತಮ್ಮ ಜಿಲ್ಲೆಗೆ ಹಂಚಿಕೆಯಾಗಿರುವ ಅತಿಥಿ ಉಪನ್ಯಾಸಕರ ಸಂಖ್ಯಾ ಮಿತಿಯೊಳಗೆ ನೇಮಿಸಿಕೊಳ್ಳಲು ಕ್ರಮವಹಿಸುವುದು.

ಈ ಕೆಳಕಂಡ ಪಟ್ಟಿಯಲ್ಲಿ ನಿಗಧಿಪಡಿಸಿದ ಸಂಖ್ಯೆಯ ಮಿತಿಯೊಳಗೆ ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ನಿಯಮಾನುಸಾರ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದೆ. ನೇಮಕಾತಿ ಮಾಡಿಕೊಂಡ ಅತಿಥಿ ಉಪನ್ಯಾಸಕರುಗಳ ವೇತನ ಬಿಡುಗಡೆಗೆ ಸಂಬಂಧಿಸಿದಂತೆ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು ನೇಮಕಾತಿ ಮಾಡಿಕೊಂಡ ಕಾಲೇಜಿನ ಹೆಸರು, ಅತಿಥಿ ಉಪನ್ಯಾಸಕರ ಹೆಸರು ಮತ್ತು ವಿಷಯ, ಅವರಿಗೆ ದೊರಕುವ ಕಾರ್ಯಭಾರ ಹಾಗು ಪ್ರತಿ ಅತಿಥಿ ಉಪನ್ಯಾಸಕರಿಗೆ ಜುಲೈ-2018 ರಿಂದ ಮಾರ್ಚ್-2019 ರವರೆಗೆ ಲೆಕ್ಕ ಹಾಕಿ ಬಿಡುಗಡೆ ಮಾಡಬೇಕಾದ ಮೊತ್ತದ ವಿವರಗಳನ್ನು ಜಿಲ್ಲಾವಾರು ಕ್ರೋಢೀಕೃತ ಮಾಹಿತಿಯನ್ನು ದಿನಾಂಕ: 31/07/2018ರ ಒಳಗೆ ಈ ಕಚೇರಿಗೆ ಸಲ್ಲಿಸಲು ಸೂಚಿಸಿದೆ. ಜಿಲ್ಲಾ ಉಪ ನಿರ್ದೇಶಕರುಗಳ ವರದಿಯನ್ನಾಧರಿಸಿ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಧನ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.

## ಜಿಲ್ಲಾವಾರು ಹಂಚಿಕೆ ಮಾಡಿದ ಅತಿಥಿ ಉಪನ್ಯಾಸಕರ ವಿವರ

| 2018-19ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮಂಜೂರು ಮಾಡಿರುವ ಅತಿಥಿ ಉಪನ್ಯಾಸಕರ ವಿವರ | | |
|---|---|---|
| ಕ್ರಮ ಸಂಖ್ಯೆ | ಜಿಲ್ಲೆ | ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿರುವ ಅತಿಥಿ ಉಪನ್ಯಾಸಕರುಗಳ ಸಂಖ್ಯೆ |
| 1. | ಬೆಂಗಳೂರು ಉತ್ತರ | 31 |
| 2. | ಬೆಂಗಳೂರು ದಕ್ಷಿಣ | 30 |
| 3. | ಬೆಂಗಳೂರು ಗ್ರಾಮಾಂತರ | 46 |
| 4. | ರಾಮನಗರ | 70 |
| 5. | ಬಳ್ಳಾರಿ | 117 |
| 6. | ಚಿಕ್ಕೋಡಿ | 70 |
| 7. | ಬೆಳಗಾವಿ | 125 |
| 8. | ಬಾಗಲಕೋಟೆ | 118 |
| 9. | ವಿಜಯಪುರ | 69 |
| 10. | ಬೀದರ್ | 77 |
| 11. | ದಾವಣಗೆರೆ | 71 |
| 12. | ಚಿತ್ರದುರ್ಗ | 70 |
| 13. | ಚಿಕ್ಕಮಗಳೂರು | 111 |
| 14. | ಗದಗ | 86 |
| 15. | ಹಾವೇರಿ | 76 |
| 16. | ಧಾರವಾಡ | 50 |
| 17. | ಕಲಬುರಗಿ | 100 |
| 18. | ಯಾದಗಿರಿ | 98 |
| 19. | ಹಾಸನ | 150 |
| 20. | ಚಿಕ್ಕಬಳ್ಳಾಪುರ | 84 |
| 21. | ಕೋಲಾರ | 100 |
| 22. | ಚಾಮರಾಜನಗರ | 39 |
| 23. | ಮೈಸೂರು | 154 |
| 24. | ಮಂಡ್ಯ | 117 |
| 25. | ಉತ್ತರ ಕನ್ನಡ | 97 |
| 26. | ಕೊಪ್ಪಳ | 103 |
| 27. | ರಾಯಚೂರು | 172 |
| 28. | ದಕ್ಷಿಣ ಕನ್ನಡ | 217 |
| 29. | ಉಡುಪಿ | 77 |
| 30. | ಶಿವಮೊಗ್ಗ | 88 |
| 31. | ತುಮಕೂರು | 141 |
| 32. | ಕೊಡಗು | 43 |
| | ಒಟ್ಟು | 2997 |

6/7/18

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಇವರಿಗೆ:-

ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಮುಂದಿನ ಅಗತ್ಯ ಕ್ರಮಕ್ಕಾಗಿ.

ಪ್ರತಿ:-

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಲೆಕ್ಕಾಧಿಕಾರಿಗಳು, ಲೆಕ್ಕಪತ್ರ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ.
3. ಇ-ಆಡಳಿತ ಶಾಖೆ – ಅಂತರ್ಜಾಲದಲ್ಲಿ ಪ್ರಕಟಿಸಲು.
4. ಕಚೇರಿ ಪ್ರತಿ.